120

ನಮ್ಮ ಹಬ್ಬಗಳು

ಲೇಖಕರು: ಶ್ಯಾಮ, ಪುತ್ತೂರು

೧ ಯುಗಾದಿ, ೨ ನಾಗರಪಂಚಮಿ, ೩. ಶ್ರೀಕೃಷ್ಣಜಯಂತಿ,
೪ ಗಣೇಶಚತುರ್ಥಿ, ೫ ನಾಡಹಬ್ಬ ದಸರಾ, ೬. ದೀಪಾವಳಿ,
೭. ಕನ್ಯಮರಿಯಮ್ಮಳ ಜನ್ಮದಿನ, ೮. ಕ್ರಿಸ್ತನ ಜನ್ಮದಿನ,
೯. ಸಾಂತ್ ಮಾರ್ಯಾ,
೧೦. ರಮ್ಜಾನ್, ೧೧. ಈದ್, ೧೨. ಮೊಹರಂ.

1957.

ಒಂದಾಣೆ ಮಾಲೆ

ಒಂದಾಣೆ ಮಾಲೆಯ ಈ ವರೆಗಿನ ಪ್ರಕಟಣೆಗಳು:

೧*ಕೆಪ್ಪಟರಾಯ; ೨ ನಾರೀಶ್ವರರು(ದ್ವಿ. ಮುದ್ರಣ); ೩ ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ) ೪ *ಸದ್ರಿಸುಬ್ಬ: ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮* ಇಂಗ್ಲಿಷ್–ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ. ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ ಶ್ರೀ ಕ್ಷೇತ್ರ ಧರ್ಮಸ್ಥಳ (ಚ. ಮುದ್ರಣ); ೧೨ ಜೀವದ ಮೌಲ್ಯ (ದ್ವಿ. ಮುದ್ರಣ); ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ. ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ(ದ್ವಿ, ಮುದ್ರಣ); ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ–I(ದ್ವಿ. ಮುದ್ರಣ); ೨೨ ತಿರುಕ್ಕುರಲ್ (ದ್ವಿ. ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ–II (ದ್ವಿ. ಮು); ೨೫ ಧೈರ್ಯ ಮತ್ತು ಇತರ ಸತ್ಯ ಕಥೆಗಳು; ೨೬ ಮಾರಾವತಾರ(ದ್ವಿ. ಮು); ೨೭ಹಾಸವಿಲಾಸ(ದ್ವಿ. ಮು.); ೨೮ ಸತ್ಯವಂತ ಬಾಬಿ [ದ್ವಿ. ಮು.]; ೨೯ ಜಾಣ್ಮೆಯ ಒಗಟು (ದ್ವಿ. ಮು); ೩೦ ಜಾತಕ ಕಥೆಗಳು(ದ್ವಿ. ಮು.); ೩೧ ಕಾರ್ಕಳದ ಚರಿತ್ರೆ; ೩೨ ಮಂಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನಹೊಳೆ ಮತ್ತು ಕೇಶವಭೂಪ; ೩೫ ಶರಾಬಿನಪೀಪಾಯಿಗಳು; ೩೬ ಉಪದೇಶ ಶತಕ; ೩೭*ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ. ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ. ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ (ದ್ವಿ. ಮು.) ೪೬ ೧೮೫೭ರಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟಿಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ: ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ್; ೬೪ ಲೌಕಿಕ ನ್ಯಾಯಗಳು; ೬೫*ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ. ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯* ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ. ಕ. ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ....; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧. ಆದಿಶ್ರೀ ಶಂಕರಾಚಾರ್ಯರ ಜೀವನಚರಿತ್ರೆ (ದ್ವಿ. ಮು.) ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ದ್ವಿ. ಮು.) ೮೩ ಬೆಡಗಿನ ನಾಡು ಕೊಡಗು; ೮೪ ಅಮ್ಮೆಯ ಚಿಪ್ಪು ಮತ್ತು ಇತರ ಸತ್ಯ ಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ

[ಪುಟ 14ಕ್ಕೆ ಮುಂದುವರಿದಿದೆ]

ಅರಿಕೆ

ಕಾಲಮಾನದ ಸಂಕಲೆಯಲ್ಲಿ. ಹಬ್ಬಗಳ ಅದೆಷ್ಟೋ ಗೊಣಸುಗಳನ್ನು ಪೂರ್ವಜರು ನೇಯ್ದಿದ್ದಾರೆ. ನಿತ್ಯ ಜೀವನದ ಕಷ್ಟ ಕಾರ್ಪಣ್ಯಗಳ ಬೇಗೆಯಿಂದ ಬಳಲಿ ಬೆಂಡಾದ ಮಾನವನಿಗೆ ಅವು ಅಮೃತಸೇಚನವನ್ನು ಮಾಡುತ್ತವೆ. ಹೊಸತಾದ ಜೀವಕಳೆಯನ್ನು ತುಂಬುತ್ತವೆ.

ಈ ಹಬ್ಬಗಳನ್ನು ನಾವು ಆಚರಿಸುವಾಗ ಅವುಗಳ ಕುರಿತಾದ ಸಾಮಾನ್ಯ ಜ್ಞಾನವಾದರೂ ನಮ್ಮಲ್ಲಿರಬೇಕು. ಹಿಂದಿಲ್ಲದೆ ಇಂದಿಲ್ಲ "The world to-day is gift of the past." ಆದುದರಿಂದ ಹಿಂದಿನವರ ಆಚರಣೆಗಳ ಕುರಿತು ತಿಳಿದುಕೊಳ್ಳುವುದು ಇಂದಿನವರ ಕರ್ತವ್ಯ. ಅದು ನಾಗರಿಕತೆಯ ಒಂದು ಲಕ್ಷಣವೂ ಹೌದು. 'ನಹಿ ತೃಪ್ಯಾಮಿ ಪೂರ್ವೇಷಾಂ ಶೃಣ್ವಾನ್ ಶ್ಚರಿತಂ ಮಹತ್' ಎಂದು ಮಹಾಭಾರತದ ಪರೀಕ್ಷಿತ ರಾಜನೂ ಹೇಳಿದ್ದನು. ಪೂರ್ವಜರ ಕುರಿತು ತಿಳಿದುಕೊಳ್ಳುವ ಆಸಕ್ತಿ ಯಾವ ಜನಾಂಗದಲ್ಲಿ ಇಲ್ಲವೋ ಅದು ತನ್ನ ಜೀವನಶಕ್ತಿಯನ್ನು ಕಳಕೊಳ್ಳುತ್ತಿದೆ-ಎಂದು ಇತಿಹಾಸಕಾರರ ಅಭಿಮತ.

ಇರಲಿ, ಈ ದಿಶೆಯಲ್ಲಿ ನಾನು ಕೈಕೊಂಡ ಪ್ರಯತ್ನಗಳಲ್ಲಿ ಇದು ಒಂದು. ನನ್ನ ಕಾರ್ಯದಲ್ಲಿ ಸಹಕರಿಸಿದ ಗೆಳೆಯರಾದ ಶ್ರೀ। ಜೋನ್ ಡಿ' ಸೋಜಾ, ಮಂಗಳೂರು, ಶ್ರೀ। ಎಸ್ತೆಫಿನ್ ವೇಗಸ್, ಬೆಳ್ತಂಗಡಿ., ಶ್ರೀ। ಪಿ. ಕೆ. ಅಬ್ದುಲ್ಲ ಮತ್ತು ಶ್ರೀ। ಇಬ್ರಾಹಿಂ, ಪುತ್ತೂರು., ಇವರನ್ನು ಇಲ್ಲಿ ನೆನೆಯುತ್ತೇನೆ.

ಪುತ್ತೂರು, ದ. ಕ.
ತಾ. ೨೫—೧೨—೧೯೫೬.

— ಶ್ಯಾಮ್, ವಿಶಾರದ.

ನಮ್ಮ ಹಬ್ಬಗಳು

೧. ಯುಗಾದಿ

ಯುಗಾದಿ—ಎಂದರೆ ನವವರ್ಷೋದಯದ ದಿನವೆಂದು ಅರ್ಥ. ಇದು ಚೈತ್ರಮಾಸದ ಶುದ್ಧ ಪಾಡ್ಯದಂದು ಆಚರಿಸಲ್ಪಡುತ್ತದೆ. ಯುಗಾದಿಯಂದು ಸಂತೋಷದಿಂದಲೇ ಜನರೆಲ್ಲರೂ ಇರುತ್ತಾರೆ. ಹೊಸ ಉಡುಪನ್ನು ಉಡುತ್ತಾರೆ. ಮನೆಗಳನ್ನು ಶೃಂಗರಿಸಿ, ಔತಣದ ಊಟಗಳನ್ನು ಏರ್ಪಡಿಸುತ್ತಾರೆ.

ಆ ದಿನ ಶುಭಶಕುನಗಳನ್ನೇ ಕಾಣಬೇಕೆಂದೂ, ಹಾಗಾದರೆ ವರ್ಷಾಂತ್ಯದ ತನಕವೂ ಶುಭಫಲಗಳೇ ಕೈಸೇರುವವೆಂದೂ ಜನರ ನಂಬಿಕೆ. ಆದುದರಿಂದ ಮುನ್ನಾದಿನವೇ ವಠಾವನ್ನು ವಿಶೇಷವಾಗಿ ಶುಚಿಗೊಳಿಸಿ ಶುಭಶಕುನಗಳೇ ಕಣ್ಣಿಗೆ ಗೋಚರಿಸುವಂತೆ ವ್ಯವಸ್ಥೆಮಾಡುತ್ತಾರೆ. ಇದಕ್ಕೆ 'ಕಣಿ' ಇಡುವುದು ಎನ್ನುತ್ತಾರೆ. ಪ್ರಾತಃಕಾಲ ಎದ್ದೊಡನೆ, ಕಣಿಯನ್ನು ನೋಡಿ, ಗುರುಹಿರಿಯರಿಗೆ ಮಣಿದು ವಂದಿಸುತ್ತಾರೆ. ವಿಶೇಷವಾಗಿ ಸಂಪತ್ತನ್ನು ಸಂಗ್ರಹಿಸುವುದಲ್ಲದೆ, ವ್ಯಯಿಸುವ ರೂಢಿಯಿರುವುದಿಲ್ಲ. ಒಕ್ಕಲಿಗರು ಧನಿಗಳಿಗೆ ಕಾಣಿಕೆ ಕೊಟ್ಟು ತಮ್ಮ ವಿಧೇಯತೆಯನ್ನು ತೋರಿಸುತ್ತಾರೆ, ಅಲ್ಲದೆ ಧನಿಗಳ ಮನೆಯ ಔತಣದಲ್ಲೂ ಭಾಗವಹಿಸುತ್ತಾರೆ. ಪ್ರತಿ ಮನೆಯಲ್ಲೂ ಷಡ್ರಸ ಭೋಜನವನ್ನೇರ್ಪಡಿಸುತ್ತಾರೆ.

೨. ನಾಗರಪಂಚಮಿ

ನಾಗರಪಂಚಮಿಯ ಆಚರಣೆಯೇನೂ ಇಂದು ನಿನ್ನೆಯದಲ್ಲ. ಬಹಳ ಹಿಂದಿನ ಕಾಲದಲ್ಲೇ ಅಂದರೆ ಆರ್ಯರ ಆಗಮನಕ್ಕಿಂತ ಪೂರ್ವದಲ್ಲೇ ಇದು ರೂಢಿಯಲ್ಲಿತ್ತೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ದ್ರಾವಿಡರು ಕೂಡಾ ಕಲ್ಲಿನಲ್ಲಿ ಕೆತ್ತಿದ ನಾಗನ ಮೂರ್ತಿಯನ್ನು ಪೂಜಿಸುತ್ತಿದ್ದರು.

ಕಾಳಿಯನು ಜಮುನಾನದಿಯಲ್ಲಿ ತಂಗಿ ಜನರಿಗೆ ಪೀಡೆಕೊಡು ತ್ತಿದ್ದಾಗ, ಭಗವಾನ್ ಶ್ರೀಕೃಷ್ಣನು ಅವನನ್ನು ಮರ್ದಿಸಿದನಲ್ಲವೇ? ಆ ಕಾಲದಲ್ಲಿ ಸಾಮಾನ್ಯರಾದ ಗೋವಳರು, ಕಾಳಿಯನು ಬಾಲಕ ಕೃಷ್ಣನಿಗೆ ಹಾನಿಮಾಡದೆ ಇದ್ದುದಕ್ಕಾಗಿ ನಾಗನನ್ನು ಪೂಜಿಸತೊಡಗಿದರೆಂದು ಒಂದು ಕಥೆಯಿದೆ.

ಶಿವಭಕ್ತನೊಬ್ಬ ಭಕ್ತಿಯ ಹೆಸರಿನಿಂದ ಹರನ ಹೊರತು ಅನ್ಯರಿಗೆ ಬಾಗುವುದಿಲ್ಲವೆಂದು ಅಹಂಕಾರಪಡುತ್ತಿದ್ದಾಗ ಅವನನ್ನು ಸರಿದಾರಿಗೆ ತರುವು ದಕ್ಕಾಗಿ ನಾರದಮುನಿಯು ಪರಶಿವನ ಮಾನಸಪುತ್ರಿ ಹಾಗೂ ನಾಗಲೋಕದ ಅಧಿದೇವತೆಯಾದ ಮಾನಸಾದೇವಿಯನ್ನು ಪ್ರೇರೇಪಿಸಿ ತನ್ಮೂಲಕ ಜಗತ್ತಿಗೆ "ಏಕೋ ಸತ್ ವಿಪ್ರಾಃ ಬಹುಧಾವದಂತಿ" ಎಂಬ ಉಕ್ತಿಯಂತೆ ದೇವರು ಒಬ್ಬನೇ ಎಂಬ ತತ್ತ್ವ ಬೋಧಿಸಿದನೆಂತಲೂ ಅಂದಿನಿಂದ ನಾಗಪೂಜೆ ಆರಂಭ ವಾಯಿತೆಂದೂ ಇನ್ನೊಂದು ಹೇಳಿಕೆಯಿದೆ. ಹೀಗೆ ಹಲವಾರು ಕಥೆಗಳು ಸಿಕ್ಕುತ್ತವೆ.

ಹೇಗಿದ್ದರೂ ಆದಿಕಾಲದಲ್ಲಿ ಪ್ರಕೃತಿಯ ಸೌಂದರ್ಯ ಹಾಗೂ ಪ್ರಭಾವವನ್ನು ಕಂಡು ಬೆಕ್ಕಸ ಬೆರಗಾದ ಮಾನವ ಸಂತತಿಯಿಂದ ಇಂತಹ ಹಬ್ಬಗಳು ಹುಟ್ಟಿಕೊಂಡಿರಬಹುದು ಎಂಬುದರಲ್ಲಿ ಸಂಶಯವಿರಬಾರದು.

ಹುತ್ತಗಳಿಗೆ ಹಾಲು ಎರೆಯುವುದು, ಸ್ತೋತ್ರಮಾಡುತ್ತಾ ಪ್ರದಕ್ಷಿಣೆ ಬರುವುದು, ಪೂಜೆಪುರಸ್ಕಾರಗಳಿಂದ ಈ ದಿನವನ್ನು ಆಚರಿಸುತ್ತಾರೆ. ನಾಗನ ಪ್ರತಿಮೆಗಳು ಸ್ಥಾಪಿಸಲ್ಪಟ್ಟಿರುವ 'ವನ'ಗಳಲ್ಲಿಯೂ ಪೂಜೆಗಳನ್ನು ನೆರವೇರಿಸುತ್ತಾರೆ. ಇದಕ್ಕೆ 'ತಂಬಿಲ ಕಟ್ಟುವದು' ಎನ್ನುತ್ತಾರೆ.

■■■■■■■■

೩. ಶ್ರೀಕೃಷ್ಣಜಯಂತಿ

ಪರಿತ್ರಾಣಾಯ ಸಾಧೂನಾಂ । ವಿನಾಶಾಯ ಚ ದುಷ್ಕೃತಾಂ ॥
ಧರ್ಮಸಂಸ್ಥಾಪನಾರ್ಥಾಯ । ಸಂಭವಾಮಿ ಯುಗೇ ಯುಗೇ ॥

ಎಂದು ಭಗವದ್ವಾಕ್ಯ. ಭೂಭಾರವು ಹೆಚ್ಚಿ ಕ್ರೂರಿಗಳ ಕಾರುಭಾರವೇ ನಡೆಯತೊಡಗಿದಾಗ, ಶ್ರಾವಣಮಾಸ ಬಹುಳ ಅಷ್ಟಮಿಯಂದು ಸರಿ ಅರ್ಧರಾತ್ರಿಯ ಹೊತ್ತಿಗೆ ಕ್ರೂರಿಯೂ ಸ್ವೇಚ್ಛಾಚಾರಿಯೂ ಆದ ಕಂಸನ ಜೈಲಿನಲ್ಲಿದ್ದ ವಸುದೇವ-ದೇವಕಿಯರ ಎಂಟನೆಯ ಗರ್ಭದಲ್ಲಿ ಶ್ರೀಕೃಷ್ಣನ

ಜನನವಾಯಿತು.) ಯೇಸು-ಕೃಷ್ಣರ ಜನನದಲ್ಲಿ ಸಾಮ್ಯತೆಯಿದೆ ಅಲ್ಲವೇ?) ಮುಂದೆ ಗೋವಳನಾಗಿ ಅಮಾನುಷರೀತಿಯಲ್ಲಿ ಬೆಳೆದ ಭಗವಂತನು ಆಯಾಯಾ ಕಾಲದಲ್ಲಿ ಅನ್ಯಾಯಿಗಳನ್ನೂ ಅಧರ್ಮಿಗಳನ್ನೂ ಶಿಕ್ಷಿಸಿ ಧರ್ಮಸಂಸ್ಥಾಪನೆಯನ್ನು ಮಾಡಿದನು.

ಅಂದು ಭಗವದ್ಭಕ್ತರು ಉಪವಾಸವಿದ್ದು ಭಗವಂತನ ಧ್ಯಾನ ಹಾಗೂ ಗೀತಾಪಾರಾಯಣಮಾಡುತ್ತಾ ಪರಿಶುದ್ಧರಾಗಿ ಮಧ್ಯರಾತ್ರಿಯ ವೇಳೆಗೆ ಕಲ್ಪೋಕ್ತ ಪೂಜೆಯನ್ನು ಮಾಡುತ್ತಾರೆ. ವಿಶೇಷ ಭಕ್ಷ್ಯಭೋಜ್ಯಗಳನ್ನು ಮಾಡಿ ಭಗವಂತನಿಗೆ ಸಮರ್ಪಿಸುತ್ತಾರೆ.

ಮರುದಿನ 'ಮೊಸರುಕುಡಿಕೆ ಹಬ್ಬ'ವೆಂಬ ಸಂತೋಷಸಮಾರಂಭವನ್ನೂ ಕೆಲವು ಕಡೆ ಆಚರಿಸುವುದಿದೆ. 'ಹಗಲುವೇಷ' ಭಜನೆ ಮೊದಲಾದ ಕಾರ್ಯಕ್ರಮಗಳೂ ಇರುತ್ತವೆ.

▪▪▪▪▪▪▪▪

೪. ಗಣೇಶಚತುರ್ಥಿ

ಶ್ರಾವಣ ಮಾಸದ ಶುದ್ಧ ಚತುರ್ಥಿಯ ದಿನ ಈ ಹಬ್ಬವು ಆಚರಿಸಲ್ಪಡುತ್ತದೆ. ವೈದಿಕ ಧರ್ಮಶಾಸ್ತ್ರಪ್ರಕಾರ ಗಣಪತಿಯು ಸಕಲ ವಿಘ್ನ ವಿನಾಶಕನು. ಈತನು ಒಲಿಯುವುದರಿಂದ, ಕೈಕೊಂಡ ಯಾವುದೇ ಕಾರ್ಯವಾದರೂ ನಿರ್ವಿಘ್ನವಾಗಿ ನೆರವೇರುತ್ತವೆ. ಬುದ್ಧಿಪ್ರದಾಯಕನಾದ ಇವನಲ್ಲಿ ಭಕ್ತಿಯನ್ನಿರಿಸುವುದರಿಂದ ಜ್ಞಾನವೃದ್ಧಿಯಾಗುವುದೆಂದೂ ಜನರ ನಂಬಿಕೆಯಾಗಿದೆ. ಆದುದರಿಂದ ಪ್ರತಿಯೊಂದು ಕೆಲಸವನ್ನು ಆರಂಭಿಸುವಾಗಲೂ ವಿನಾಯಕನಿಗೆ ಅಗ್ರಪೂಜೆಯು ಸಲ್ಲುತ್ತದೆ.

ಮನೆಮನೆಗಳಲ್ಲಿ ಗಣಪತಿಯ ವಿಗ್ರಹವನ್ನು ಮಾಡಿ ಪೂಜಿಸುತ್ತಾರೆ. ತರತರದ ಭಕ್ಷ್ಯಗಳನ್ನು ಮಾಡಿ ಗಣಪತಿಗೆ ಸಮರ್ಪಿಸುತ್ತಾರೆ. ಸಾರ್ವಜನಿಕವಾಗಿ ಕೂಡ ಈ ಹಬ್ಬವನ್ನು ಆಚರಿಸುವುದಿದೆ. ಹೋಮವನ್ನು ಮಾಡುವುದೂ ಇದೆ. ವಿಶೇಷವಾಗಿ ಆಚರಿಸಲ್ಪಡುವ ಹಬ್ಬಗಳಲ್ಲಿ ಇದು ಕೂಡ ಒಂದು.

▪▪▪▪▪▪▪▪

೫. ದಸರಾ

ದಸರಾ ನಾಡಹಬ್ಬವು ಭರತಖಂಡದಲ್ಲೇ ಪ್ರಸಿದ್ಧವಾದ ಹಬ್ಬ. ಕನ್ನಡ ನಾಡಿನಲ್ಲಂತೂ ಇದಕ್ಕೆ ಬಹಳ ಮಹತ್ವವಿದೆ. ಇದರ ಹೆಸರೇ ಸೂಚಿಸುವಂತೆ (ದಶ + ರಾ) ಆಶ್ವಯುಜ ಮಾಸದಲ್ಲಿ ಶುಕ್ಲ ಪಕ್ಷದ ಮೊದಲ ಹತ್ತು ದಿನಗಳಲ್ಲಿ ಈ ಹಬ್ಬವು ಆಚರಿಸಲ್ಪಡುತ್ತದೆ. ವೈದಿಕಸಂಪ್ರದಾಯದವರು ಈ ಹತ್ತು ದಿನಗಳಲ್ಲಿ ಹಲವು ವಿಧಾನಗಳಲ್ಲಿ ಜಗತ್ತಿನ ಚೈತನ್ಯಶಕ್ತಿಯಾದ ಶ್ರೀದೇವಿಯ ಮಹಾಕಾಳಿ, ಲಕ್ಷ್ಮಿ, ಸರಸ್ವತಿ ಎಂಬ ಮೂರು ರೂಪಗಳನ್ನು ಪೂಜಿಸುತ್ತಾರೆ. ಪೂಜೆ-ಪುರಸ್ಕಾರಗಳು ಹಾಗೂ ಮನೋರಂಜನಾ ಕಾರ್ಯಕ್ರಮಗಳ ಮೂಲಕ ಜನರು ಆತ್ಮಿಕ ಹಾಗೂ ಬೌದ್ಧಿಕ ವಿಕಾಸವನ್ನು ಮಾಡಿಕೊಳ್ಳುತ್ತಾರೆ. ಈ ದಿನಗಳಲ್ಲಿ ಕೈಕೊಂಡ ಕಾರ್ಯವು ಯಶಸ್ಸಿನಲ್ಲಿ ಕೊನೆಗಾಣುತ್ತದೆ ಎಂದು ಜನರಲ್ಲಿ ನಂಬಿಕೆಯಿದೆ. ಆದುದರಿಂದಲೇ ಹೆಚ್ಚಾಗಿ ದಶಮಿಯಂದು ವಿದ್ಯಾರಂಭಮಾಡುತ್ತಾರೆ.

ವಾರಣಾಸಿ ಪ್ರಸಿದ್ಧವಾದ ಕ್ಷೇತ್ರ. ಪೂರ್ವದಲ್ಲಿ ಸುರಥನೆಂಬಾತನು ಅಲ್ಲಿಯ ದೊರೆಯಾಗಿದ್ದು ವೈಭಯುಕ್ತವಾಗಿ ರಾಜ್ಯವಾಳುತ್ತಿದ್ದನು. ಕಾಲಚಕ್ರದ ಉರುಳಾಟ! ವೈರಿಗಳು ಆತನನ್ನು ದಿಕ್ಕಾಪಾಲುಮಾಡಿಬಿಡುಟ್ಟರು.

ರಾಜ್ಯಭ್ರಷ್ಟನಾದ ದೊರೆ ತನ್ನ ದೇಶಭ್ರಮಣದ ಕಾಲದಲ್ಲಿ ಶಮಾಧಿ ವೈಶ್ಯನೆಂಬವನ ಸಾಮೀಪ್ಯವನ್ನು ಹೊಂದುತ್ತಾನೆ. ವೈಶ್ಯನಾದರೊ ಧನಾಢ್ಯ ವ್ಯಕ್ತಿ. ಆದರೆ, ಹೆಂಡತಿಯು ಕೈಗೊಂಬೆ. ಆ ದುಷ್ಟ ಸ್ತ್ರೀ ಆತನನ್ನು ಅನ್ಯಾಯವಾಗಿ ಮನೆಯಿಂದ ಹೊರಕ್ಕಟ್ಟಿದಳು. ನಿರ್ಗತಿಕ ವೈಶ್ಯನು ಅಲೆದಾಡುತ್ತಿದ್ದಾಗ ದೊರೆ ಸುರಥ ಕಾಣಸಿಕ್ಕಿದನು. 'ಸಮಾನ ವ್ಯಸನೇಷು ಸಖ್ಯಂ' ಇಬ್ಬರೂ ಗೆಳೆಯರಾದರು.

ಹೀಗಿರುತ್ತಾ ಮಾರ್ಕಾಂಡೇಯ ಮಹರ್ಷಿಗಳ ಶಿಷ್ಯನಾದ ಸುಮೇಧ ಮಹರ್ಷಿಯ ಸಲಹೆಯಂತೆ ಅವರು ಜಗದಾದಿಶಕ್ತಿಯಾದ ಶ್ರೀದೇವಿಯನ್ನು ತದೇಕಚಿತ್ತದಿಂದ ಭಜಿಸಿದರು. ದಶಮಿಯ ದಿನ ಪ್ರಾತಃಕಾಲ (ನವಮಿಯ ರಾತ್ರಿ)ದಲ್ಲಿ ಅವರಿಗೆ ದೇವಿಯು ಪ್ರಸನ್ನಳಾದಳು. ದಶಮಿಯಂದು ಪ್ರಜೆಗಳು ಅಲ್ಲಿಗೆ ಬಂದು ರಾಜನನ್ನು ಗದ್ದುಗೆಗೇರಿಸಿದರು. ವೈಶ್ಯನಿಗೂ ಸಂಪತ್ತುಗಳು ದೊರಕಿದವು. ಅಂದಿನಿಂದ ದೇವಿಯ ಆರಾಧನೆಯು ಆರಂಭವಾಯಿತೆಂದು ಕಥೆಯಿದೆ.

ಅಂದು ಅವರು ವಿಜಯಿಗಳಾದುದರಿಂದ ಆ ದಿನವನ್ನು ವಿಜಯದಶಮಿ ಯೆಂದೂ, ಅಂದು ವಿದ್ಯಾರಂಭಮಾಡುವುದರಿಂದ ವಿದ್ಯಾದಶಮಿಯೆಂದೂ ಹೇಳುತ್ತಾರೆಂದು ಊಹಿಸಬಹುದು.

....

೬. ದೀಪಾವಳಿ

ವೈದಿಕ ಧರ್ಮಾನುಯಾಯಿಗಳು ವರ್ಷದ ೩೬೫ ದಿನಗಳಲ್ಲಿ ಹಲವಾರು ಹಬ್ಬಹರಿದಿನಗಳನ್ನು ಆಚರಿಸುತ್ತಾರೆ. ಒಂದೊಂದರ ಆಚರಣೆ ಒಂದೊಂದು ರೀತಿ, ಒಂದೊಂದರಲ್ಲಿಯೂ ಒಂದೊಂದು ವೈಶಿಷ್ಟ್ಯ. ಇವುಗಳಲ್ಲೆಲ್ಲ ದೀಪಾವಳಿ ಬಹಳ ಮಹತ್ವಿಕೆಯುಳ್ಳದ್ದು.

ಅದರ ಹೆಸರೇ ಸೂಚಿಸುವ ಹಾಗೆ ದೀಪಗಳನ್ನು ಉರಿಸಿ ಪೂಜಿಸುವುದೇ ಈ ಹಬ್ಬದ ಮಹತ್ವ. ಅನಾದಿಯಲ್ಲಿ ಅನಿರೀಕ್ಷಿತವಾಗಿ ಬೆಂಕಿ ಹುಟ್ಟಿಕೊಂಡು, ಅದರಿಂದಾಗಿ ಬೆಂಕಿಯ ಪ್ರಯೋಜನವನ್ನು ತಿಳಿದ ಜನರು ಅದನ್ನು ಕಾಯ್ದಿರಿಸಿಕೊಳ್ಳತೊಡಗಿದರೆಂದೂ ತನ್ಮೂಲಕ ಅಗ್ನಿಯ ಆರಾಧನೆ ಆರಂಭವಾಗಿರಬೇಕೆಂದೂ ಬಲ್ಲವರ ಅಂಬೋಣ.

ಹೇಗಿದ್ದರೂ ಸಾಮಾನ್ಯರ ಮಟ್ಟಿಗೆ ಇದರ ಕುರಿತಾದ ಪೌರಾಣಿಕ ಕಥೆಗಳೇ ಇದರ ಆಚರಣೆಗೆ ಆಧಾರ. ಆಶ್ವಯುಜಮಾಸದಲ್ಲಿ ಅಮಾವಾಸ್ಯೆಯ ದಿನದಂದು ಹಾಗೂ ಅದರ ಹಿಂದಿನ ಚತುರ್ದಶಿ ಮತ್ತು ಮುಂದಿನ ಪಾಡ್ಯ—ಹೀಗೆ ಮೂರು ದಿನ ಹಬ್ಬವನ್ನು ಆಚರಿಸುತ್ತಾರೆ.

ಭಗವಂತನು ದೇವತೆಗಳಿಗೆ ಬಲಿಯಿಂದ ಅಪಹರಿಸಲ್ಪಟ್ಟ ರಾಜ್ಯವನ್ನು ಕೊಡಿಸುವುದಕ್ಕಾಗಿ ವಾಮನಾವತಾರವನ್ನು ತಾಳಿ, ದೀಕ್ಷಾಬದ್ಧನಾದ ಬಲಿಯಿಂದ ಮೂರು ಮೆಟ್ಟು ಸ್ಥಳವನ್ನು ಬೇಡಿ ತನ್ಮೂಲಕ ಬಲಿಯನ್ನು ನಿಗ್ರಹಿಸಿ, ದೇವತೆಗಳಿಗೆ ಅಭಯದಾನಮಾಡಿದ್ದನು ಮಾತ್ರವಲ್ಲ, ಬಲಿಯ ಭಕ್ತಿಗೆ ಮೆಚ್ಚಿ ಅವನನ್ನೂ ಅನುಗ್ರಹಿಸಿದನು. ಆ ಕಾರಣ ಆ ದಿನ ತೈಲಾಭ್ಯಂಗವನ್ನು ಮಾಡುತ್ತಾರೆ.

ಅಮಾವಾಸ್ಯೆಯಂದು ಮನೆಗಳನ್ನು ಅಲಂಕರಿಸಿ, ದೀಪಗಳಿಂದ ಶೋಭಾಯಮಾನವನ್ನಾಗಿ ಮಾಡುತ್ತಾರೆ. ಅಂಗಳದಲ್ಲಿ ತುಳಸೀಕಟ್ಟೆಯ ಬಳಿ ದೀಪಸ್ತಂಭಗಳನ್ನು ನೆಟ್ಟು ಪೂಜಿಸುತ್ತಾರೆ.

ಬಲಿಪಾಡ್ಯದಂದು ಧನಲಕ್ಷ್ಮೀಪೂಜೆ, ಧಾನ್ಯಲಕ್ಷ್ಮೀಪೂಜೆ ಹಾಗೂ ಗೋಪೂಜೆಗಳನ್ನು ನೆರವೇರಿಸುತ್ತಾರೆ. ಇದರಿಂದ ತಮ್ಮಲ್ಲಿ ಧನ–ಧಾನ್ಯ ಸಂಪದಭಿವೃದ್ಧಿಯಾಗುವುದೆಂದು ಜನರ ನಂಬಿಕೆಯಿದೆ. 'ಗಾವೋ ವಿಶ್ವಸ ಮಾತರಃ' ಎಂಬ ತತ್ವವನ್ನು ಪ್ರತಿಯೊಬ್ಬನೂ ಭಕ್ತಿಯಿಂದ ಕಾಣುವ ದಿನವಿದು.

ಮೂರು ದಿನಗಳಲ್ಲಿಯೂ ಮನೆಗಳಲ್ಲಿ ಬಹಳ ಗದ್ದಲವಿರುತ್ತದೆ. ಮಕ್ಕಳೆಲ್ಲಾ ಹೊಸ ಉಡಿಗೆ ಉಟ್ಟು ಬಣ್ಣಬಣ್ಣದ ತರತರದ ಪಟಾಕಿ ಇತ್ಯಾದಿಗಳನ್ನು ಸುಡುತ್ತಾ ಕಿಲ-ಕಿಲನೆ ನಗುತ್ತಿರುವುದನ್ನು ನೋಡಿದರೆ ಸ್ವರ್ಗವೇ ಕೆಳಗಿಳಿದು ಬಂದಂತೆ ಕಾಣುತ್ತದೆ. ಎಂತಹ ಬಡವನ ಮನೆಯಲ್ಲಿ ಯಾದರೂ ಈ ಮೂರೂ ದಿನಗಳಲ್ಲಿಯೂ ಭಕ್ಷ್ಯಾದಿಗಳನ್ನು ಮಾಡುತ್ತಾರೆ. ಸಮಾಜದಲ್ಲಿರುವ ಅಂಧಕಾರವನ್ನು ಓಡಿಸಿ, ಸದಾ ಸುಖಸಂತೋಷದ ಪ್ರಭೆಯನ್ನೇ ಹರಡುತ್ತಿರಲೆಂಬುದೇ ದೀಪಾವಳಿಯ ಆಶಯ.

....

೭. ಕನ್ಯೆಮರಿಯಮ್ಮಳ ಜನ್ಮದಿನ

(Nativity Of Blessed Virgin Mary)

ಕನ್ಯೆಮರಿಯಮ್ಮಳ ಜನ್ಮದಿನವು ಕ್ರೈಸ್ತ ಮತಾವಲಂಬಿಗಳಾದ ರೋಮನ್ ಕೆಥೋಲಿಕರ ಮುಖ್ಯ ಹಬ್ಬಗಳಲ್ಲೊಂದು. ಲೋಕೋದ್ಧಾರಕಾಗಿ ಜನ್ಮವೆತ್ತಿದ ದೇವರ ಮಗನಾದ ಏಸುವಿನ ತಾಯಿಯಾಕೆ. ಮದುವೆ ಯಾದರೂ ಕನ್ಯೆಯಾಗಿಯೇ ಉಳಿದುಕೊಂಡ ಆಕೆಯು ಭಗವಂತನ ಕೃಪೆ ಯಿಂದ, ಜನತೆಯ ಹೃದಯದಲ್ಲಿ ಪ್ರೇಮಜ್ಯೋತಿಯನ್ನು ಬೆಳಗಿಸಲಿರುವ ಏಸುಮಹಾತ್ಮನನ್ನು ಹಡೆದಳು. ಆಕೆಯ ಜನ್ಮದಿನವನ್ನು ವರ್ಷಂಪ್ರತಿ ಸಪ್ತಂಬರ ೮ರಂದು ವಿಶ್ವದ ಮೂಲೆ ಮೂಲೆಗಳಲ್ಲಿ ಕೆಥೋಲಿಕರು ಇರುವಲ್ಲೆಲ್ಲ ಆಚರಿಸುತ್ತಾರೆ.

ಈ ಹಬ್ಬದ ಮುಖ್ಯ ಅಂಗವೆಂದರೆ ದಿವ್ಯಶರೀರಿಯಾದ ಮರಿಯಮ್ಮಳ ಪ್ರತಿಮೆಯನ್ನು ಪೂಜಿಸುವುದು. ಹಿಂದುಜನರು ಹೆಚ್ಚಾಗಿ ನವರಾತ್ರಿ ಕಾಲದಲ್ಲಿ 'ಹೊಸತು' ಉಣ್ಣುವಂತೆ ಕ್ರೈಸ್ತರು ಈ ದಿನದಲ್ಲಿ 'ಹೊಸತು' ಉಣ್ಣುತ್ತಾರೆ. ಅಂದರೆ ಹೊಸ ಅಕ್ಕಿಯನ್ನು ಉಣ್ಣಲು ಆರಂಭಿಸುತ್ತಾರೆ.

ಆದುದರಿಂದ ಹಳ್ಳಿಗರು ಈ ದಿನವನ್ನು, 'ಹೊಸತು ಹಬ್ಬ' ಎನ್ನುವುದೂ ಇದೆ.

ಈ ದಿನದ ಆಚರಣೆಗೆ ಪೂರ್ವತಯಾರಿಯು ಒಂಭತ್ತು ದಿನಗಳ ಮುಂಚಿತವಾಗಿಯೇ ಆರಂಭವಾಗುವುದು. ತಯಾರಿಯ ದಿನಗಳಲ್ಲಿ ಅಂದರೆ ಆಗೋಸ್ತು ೩೦ರಿಂದ ಸಪ್ತಂಬರ ೭ರ ವರೆಗೆ ಪ್ರಾತಃಕಾಲ ಮತ್ತು ಸಂಜೆ ಎರಡೂ ಹೊತ್ತುಗಳಲ್ಲಿ ಮಕ್ಕಳು ಹರಿವಾಣಗಳಲ್ಲಿ ಹೂಗಳನ್ನು ತೆಗೆದುಕೊಂಡು ಇಗರ್ಜಿಗೆ ಹೋಗುವರು. ಪುಟ್ಟ ಕೈಗಳಲ್ಲಿ ಹೂ ತುಂಬಿದ ಹರಿವಾಣಗಳನ್ನೊ ಬುಟ್ಟಿಗಳನ್ನೋ ಹಿಡಿದುಕೊಂಡು ಆ ಎಳೆಯ ಮಕ್ಕಳು ಉತ್ಸಾಹದಿಂದ ಗುಂಪು ಗುಂಪಾಗಿ ಹೋಗುವುದನ್ನು ನೋಡುವಾಗ 'ಮಕ್ಕಳಲ್ಲಿ ಸ್ವರ್ಗವು ನೆಲಸಿದೆ ಎಂಬ ಮಾತಿನ ಯಥಾರ್ಥತೆಯ ಅರಿವು ಎಂಥವನಿಗಾದರೂ ಆಗದಿರದು. ತೆಗೆದುಕೊಂಡು ಹೋದ ಹೂಗಳನ್ನು ಕೈಯಲ್ಲಿ ಹಿಡಿದು ಸಿಂಗರಿಸಲ್ಪಟ್ಟ ಬಾಲ ಮರಿಯಮ್ಮಳ ಪ್ರತಿಮೆಯ ಮುಂದೆ ಸಾಲಾಗಿ ನಿಂತು ರಾಗಯುಕ್ತವಾಗಿ ಭಕ್ತಿಪರ ಗೀತೆಗಳನ್ನು ಹಾಡಿ ಅರ್ಪಿಸುವರು.

ಹತ್ತನೆಯ ದಿನವೇ ಹಬ್ಬದ ದಿನ. ಅಂದು ಬೆಳೆಯನ್ನು ಬೆಳೆಸುವವರು ಇಗರ್ಜಿಗೆ ಹೋಗುವಾಗ, ಹಣ್ಣಾಗಿ, ಹೊಂಬಣ್ಣದಿಂದ ಕಂಗೊಳಿಸುವ ಭತ್ತದ ತೆನೆಗಳ ಚಿಕ್ಕ ಚಿಕ್ಕ ತೆನೆಗಳ ಕಚ್ಚೊಂದನ್ನು ತೆಗೆದುಕೊಂಡು ಹೋಗುತ್ತಾರೆ ಮರಿಯಮ್ಮಳ ಪೂಜೆ ಮುಗಿದೊಡನೆ ಗುರುಗಳು ಆ ಕಟ್ಟುಗಳನ್ನು ಪವಿತ್ರಗೊಳಿಸಿ, ಹರಸಿ ಪ್ರತಿ ಮನೆಗೂ ಹಂಚುವರು. ಆ ತೆನೆಯನ್ನು ಕ್ರೈಸ್ತರು ಬಹಳ ಭಕ್ತಿ ಶ್ರದ್ಧೆಗಳಿಂದ ಮನೆಗೆ ತರುತ್ತಾರೆ. ತರುವಾಗ ಮನೆಯೊಳಗೆ ಯೋಗ್ಯ ಸ್ಥಾನದಲ್ಲಿ ದೀಪವನ್ನು ಉರಿಸಿ ಇಡುವರು.

ಮನೆಯಲ್ಲಿ ಯಜಮಾನನು ಆ ಕಾಳುಗಳ ತೊಟ್ಟು ತೆಗೆದು ಪುಡಿ ಮಾಡಿ ಹಾಲಿನೊಡನೆ ಸೇರಿಸಿ ಸ್ವಲ್ಪ ಸ್ವಲ್ಪವಾಗಿ ಎಲ್ಲರಿಗೂ ಹಂಚುವನು.

ಹೊಸತು ಉಣ್ಣುವ ಈ ಹಬ್ಬದ ದಿನ ಮಾಂಸಾಹಾರವನ್ನು ಹೆಚ್ಚಾಗಿ ಯಾರೂ ಮಾಡುವುದಿಲ್ಲ. ಮಾತ್ರವಲ್ಲ, ತರತರದ ಭಕ್ಷ್ಯಭೋಜ್ಯಗಳನ್ನೂ ೭, ೧೧, ೫, ಅಥವಾ ೩ ಬಗೆ ಕಾಯಿಪಲ್ಯಗಳನ್ನೂ ಮಾಡುವರು. ವಿದೇಶಗಳಲ್ಲಿದ್ದು ಅಂದು ಮನೆಗೆ ಬರಲಾಗದಿದ್ದವರಿಗೆ ಹರಸಿದ ಭತ್ತದ ಕಾಳನ್ನು ಅಂಚೆಯ ಮೂಲಕ ಕಳುಹಿಸುವುದೂ ಇದೆ. ಲೋಕಕಲ್ಯಾಣಕಾರಕನನ್ನು ಹಡೆದ ಆ ಮಹಾ ಮಾತೆಯನ್ನು ಸ್ಮರಿಸುವಾಗ ನಾವು ಕೂಡ ಜನತಾಜನಾರ್ದನನ

ಸೇವೆಯನ್ನೆಸಗಲು ಯತ್ನಿಸಬೇಕೆಂಬ ಆಕಾಂಕ್ಷೆ ನಮ್ಮೆಲ್ಲರಿಗುಂಟಾಗುವುದಿಲ್ಲವೇ? ಆಮೆನ್.

****

೮. ಕ್ರಿಸ್ತನ ಜನ್ಮದಿನ

(Christmas)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮ ಸಂಸ್ಥಾಪನೆ ಮಾಡುವುದಕ್ಕಾಗಿ ಭಗವಂತನು ಕಾಲ ಕಾಲಗಳಲ್ಲಿ ಜನ್ಮವೆತ್ತುತ್ತಾನೆ—ಎಂದು ಜನರ ನಂಬಿಕೆ. ಅಂತಹ ದಿವ್ಯಪುರುಷನು ಅವತಾರವೆತ್ತುವ ಮುಹೂರ್ತದಲ್ಲಿ ಅನೇಕ ವಿಶೇಷ ಘಟನೆಗಳೂ ಸಂಭವಿಸಿ, ಜನತೆಗೆ ಮುಂದಿನ ಶುಭ ಸೂಚನೆಯನ್ನು ಕೊಡುತ್ತವೆ.

ಹೀಗೆಯೇ ಅಧರ್ಮವು ತಲೆಯೆತ್ತಿ ಶಿಷ್ಟಸಂಪ್ರದಾಯಕ್ಕೆ ಚ್ಯುತಿ ಬರುವ ಕಾಲದಲ್ಲಿ ಯುರೋಪಿನ ಜೆರೂಸಲೇಮ್ ನಗರದಲ್ಲಿ ಮಧ್ಯರಾತ್ರಿಯ ವೇಳೆ ತೀರ ಸಾಮಾನ್ಯ ಸ್ಥಳದಲ್ಲಿ ಲೋಕೋದ್ಧಾರಕ್ಕಾಗಿ ದೇವರ ಮಗನಾದ ಯೇಸುಸ್ವಾಮಿಯು ಉದಯಿಸಿದನು. ಅನೇಕ ವಿಶೇಷ ಘಟನೆಗಳು ದೇವಪುತ್ರನ ಆಗಮನವನ್ನು ಸಾರಿದುವು. ಈ ದಿನವು ಕ್ರಿಸ್ತಮತಾನುಯಾಯಿಗಳಿಗೆ ಮಹತ್ವದ ಹಬ್ಬ. ಇದನ್ನು ಕ್ರಿಸ್‌ಮಸ್ ಎನ್ನುವರು.

ಕ್ರೈಸ್ತರು ಈ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುವರು. ಈ ಹಬ್ಬದ ಮೊದಲನೆಯ ದಿನ ೧೮ ವರ್ಷ ಮತ್ತು ೬೦ ವರ್ಷದ ಒಳಗಿನವರು ಉಪವಾಸವಿರುತ್ತಾರೆ. ಈ ದಿನದ ಸಂಜೆಯು (Christmas Eve) ಪ್ರಖ್ಯಾತವಾಗಿದೆ. ಯೇಸುವು ಸ್ವಾಮಿಯ ಜನನವು ಮಧ್ಯರಾತ್ರಿಯಲ್ಲಿ ಆಯಿತೆಂಬ ನಂಬಿಕೆಯಿಂದ ಆ ದಿನ ಮಧ್ಯರಾತ್ರಿ (ಸಾಧಾರಣ ೧೨ ಗಂಟೆ) ಇಗರ್ಜಿಗಳಲ್ಲಿ ವಿಶೇಷ ಪ್ರಾರ್ಥನೆಯು ಜರಗುವುದು.

ಇಗರ್ಜಿಯಲ್ಲಿ ಒಂದು ಗೋದಲಿಯನ್ನು ಮಾಡಿಡುತ್ತಾರೆ. ಇದರಲ್ಲಿ ಬಾಲಯೇಸುವಿನ, ಮರಿಯಳ ಮತ್ತು ಜೋಸೆಫರ ಮೂರು ಪ್ರತಿಮೆಗಳೂ ದನಗಳ, ಕುರಿಗಳ ಮತ್ತು ಗೋವಳರ ಸಣ್ಣ ಸಣ್ಣ ಪ್ರತಿಮೆಗಳೂ ಇರುತ್ತವೆ.

ತಾ. ೨೪ರ ಆ ಇಡೀ ರಾತ್ರಿಯನ್ನು ಹೆಚ್ಚಾಗಿ ಎಲ್ಲರೂ ಸಂತೋಷದಿಂದ ಜಾಗರಣೆ ಮಾಡಿಯೇ ಕಳೆಯುವರು—ವೈದಿಕ ಧರ್ಮಾನುಯಾಯಿ

ಗಳು ಶ್ರೀಕೃಷ್ಣ ಜಯಂತಿಯಂದು ಆಚರಿಸುವ ಹಾಗೆ ಪವಿತ್ರ ಶ್ಲೋಕಗಳನ್ನೂ ಕ್ರೈಸ್ತಪುರಾಣಗಳನ್ನೂ ಓದುವರು. ತಾ. ೨೫ರಂದು ಹಗಲು ಔತಣ, ಸಂತೋಷ ಕೂಟಾದಿಗಳನ್ನು ಏರ್ಪಡಿಸುವರು. ಆಮೇನ್.

■■■■■■■■

೯. ಸಾಂತ್ ಮಾರ್ಯಾ

ಇದನ್ನು 'ಸಾಂತ ಮಾರಿ' ಹಬ್ಬವೆಂದೂ ಕರೆಯುವರು. ದೇವಾಲಯಗಳಲ್ಲಿ ಜಾತ್ರೆಗಳನ್ನು ಜರಗಿಸುವ ಇಗರ್ಜಿಗಳೆಂಬ ಕ್ರೈಸ್ತರ ಒಂದೊಂದು ಪ್ರಾರ್ಥನಾ ಮಂದಿರಗಳಲ್ಲಿ ವರ್ಷದ ಒಂದೊಂದು ಬುಧವಾರಗಳಲ್ಲಿ ಇದನ್ನು ಆಚರಿಸುವರು. ಆಸುಪಾಸಿನವರು, ನೆರೆ ಇಗರ್ಜಿಗಳ ಗುರುಗಳು ಮೊದಲಾದವರು ಒಂದೆಡೆ ಸೇರಿ ಸಂತೋಷಪಡುವರು. ಸಾಧಾರಣ ೧೦ ಗಂಟೆಗೆ ಇಗರ್ಜಿಯಲ್ಲಿ ಪ್ರಾರ್ಥನೆ ನಡೆದ ನಂತರ ಮೆರವಣಿಗೆ, ಆಶೀರ್ವಾದಗಳು ಜರಗುವುವು. ಇಗರ್ಜಿಯ ವಠಾರದಲ್ಲಿ ಆ ದಿನ ಸಂತೆಯು ಸೇರುವುದಿದೆ.

ಕೊನೆಗೆ ಎಲ್ಲರೂ ತಂತಮ್ಮ ಮನೆಗಳಿಗೆ ತೆರಳುವರು. ಭಾರಿಯ ಔತಣವೂ ಜರಗುವುದು. ಅಂತೂ ಭಾರಿ ಗೌಜಿಯ ದಿನ ಈ ಸಾಂತ ಮಾರ್ಯಾ ಹಬ್ಬ. ಆಮೆನ್.

■■■■■■■■

೧೦. ರಮ್‌ಜಾನ್

ಇಸ್ಲಾಂ ಧರ್ಮಾನುಯಾಯಿಗಳ ಮಹತ್ವದ ಹಬ್ಬಗಳಲ್ಲಿ ರಮ್‌ಜಾನ್ ಒಂದು. ರಮ್‌ಜಾನ್ ತಿಂಗಳಲ್ಲಿ ೩೦ ದಿನ ಉಪವಾಸ ಮಾಡಿ ೩೧ನೇ ದಿನ ಆಚರಿಸಲ್ಪಡುವ ಈ ಹಬ್ಬವನ್ನು 'ಪೆರ್ನಾಳ್' ಅಥವಾ 'ಸಣ್ಣ ಈದ್' ಎಂದೂ ಕರೆಯುವರು.

ಮೂವತ್ತು ದಿನ ಉಪವಾಸಮಾಡಿ, ಪವಿತ್ರರಾದ ಜನರು ಈ ದಿನ ಹೊಸ ಉಡುಪು ಧರಿಸಿ, 'ಮಸೀದಿ'ಗಳೆಂಬ ಮುಸ್ಲಿಮರ ಪ್ರಾರ್ಥನಾ ಮಂದಿರಗಳಿಗೆ ಹೋಗುತ್ತಾರೆ. ಅಲ್ಲಿ ಬಡವ–ಬಲ್ಲಿದ, ಹಿರಿಯ–ಕಿರಿಯ, ಪಂಡಿತ–ಪಾಮರರೆಂಬ ಭೇದವಿಲ್ಲದೆ, ಸಹೋದರ ಭಾವದಿಂದ ಸಾಲಾಗಿ ನಿಂತು ಒಮ್ಮೆಲೇ ಮೊಣಕಾಲೂರಿ, ತಲೆಬಾಗಿ ಪ್ರಾರ್ಥನೆ ಮಾಡುತ್ತಿರುವುದನ್ನು ನೋಡುವಾಗ ಎಂಥವನ ಹೃದಯದಲ್ಲಾದರೂ ಭಕ್ತಿಯು ಚಿಗುರೊಡೆಯದಿರದು.

ಪ್ರಾರ್ಥನಾನಂತರ ಎಲ್ಲರೂ ಸ್ವಗೃಹಗಳಿಗೆ ಮರಳಿ ಧರ್ಮಕಾರ್ಯ ದಲ್ಲಿ ನಿರತರಾಗುವರು. ಅಂದು ಉಪವಾಸ ಮಾಡುವುದು 'ಹರಾಮ್' (ಮಹಾಪರಾಧ) ಅನಿಸಿಕೊಳ್ಳುತ್ತದೆ.

೧೧. ಈದ್

ಪೆರುನಾಳ್ ಕಳೆದು ೭೦ನೇ ದಿನ ಆಚರಿಸಲ್ಪಡುವ ಈ ಹಬ್ಬವನ್ನು ದೊಡ್ಡ ಪೆರುನಾಳ್ ಎಂದೂ ಕರೆಯುತ್ತಾರೆ. ಪೆರುನಾಳಿನಂತೆಯೇ ಈ ದಿನದ ಆಚರಣೆಯೂ ಇದೆ.

ಈ ದಿನ ವಿಶೇಷವೆಂದರೆ ಹಾಜ್‌ಗೆ ಹೋದ ಯಾತ್ರಾರ್ಥಿಗಳು ಮಕ್ಕ ದಲ್ಲೂ ಇದನ್ನು ಆಚರಿಸುತ್ತಾರೆ. ಈ ಎರಡೂ ಪೆರುನಾಳ್‌ಗಳಲ್ಲಿ ಇಸ್ಲಾಂ ಧರ್ಮಾನುಯಾಯಿಗಳು ಧಾರಳವಾಗಿ ದಾನ ಧರ್ಮಗಳನ್ನು ಮಾಡುತ್ತಾರೆ.

೧೨. ಮೊಹರಂ

ಇದೇನೂ ಹಬ್ಬವಲ್ಲ; ಸೂತಕದ ದಿನ. ಭಾರತ ಹಾಗೂ ಪಾಕಿಸ್ತಾನದ ಹೊರಗೆ ಯಾವ ದೇಶದಲ್ಲಿಯೂ ಇದು ಆಚರಿಸಲ್ಪಡುವುದಿಲ್ಲವಂತೆ.

ದೇವಪ್ರವಾದಿ ಹಜರತ್ ಮುಹಮ್ಮದ್ ಪೈಗಂಬರರು ಸ್ಥಾಪಿಸಿದ ಇಸ್ಲಾಂ ಅಥವಾ ಶಾಂತಿ ಧರ್ಮದ ಗುರುವನ್ನು 'ಖಲೀಫಾ' ಎನ್ನುತ್ತಾರೆ. ಪೈಗಂಬರರ ತರುವಾಯ ಜನತೆಯಿಂದ ಆರಿಸಲ್ಪಟ್ಟವನೇ 'ಖಲೀಫಾ'ನಾಗುತ್ತಿದ್ದನು. ಆದರೆ, ಖಲೀಫ-ಮುಆವಿಯಾ ಎಂಬವನು ಈ ಪದ್ಧತಿಯನ್ನು ಅಂತ್ಯಗೊಳಿಸಿ, ವಂಶಪಾರಂಪರ್ಯವಾಗಿ ಖಲೀಫರಾಗಬೇಕೆಂದು ನಿಶ್ಚೈಸಿದನು.

ಆದರೆ 'ಮುಆವಿಯಾ'ನ ಮಗ 'ಯಜೀದ'ನ ಆಳ್ವಿಕೆಯನ್ನು ಒಲ್ಲದ ಜನರು ಪೈಗಂಬರರ ಎರಡನೇ ಮೊಮ್ಮಗನಾದ 'ಹುಸೇನ'ನನ್ನು ಖಲೀಫನಾಗುವಂತೆ ಆಹ್ವಾನಿಸಿದರು. ಇದನ್ನು ತಿಳಿದ ಅಧಿಕಾರಾರೂಢ ಖಲೀಫ ಯಜೀದನು ಜನರನ್ನು ಒಲಿಸಿಕೊಂಡನು. ಜನತೆಯ ಆಹ್ವಾನದಂತೆ ಪರಿವಾರ ಸಮೇತನಾಗಿ ಖಲೀಫನ ರಾಜಧಾನಿ 'ದಮಾಸ್ಕಸ್'ಗೆ ಬಂದ ಹುಸೇನನು 'ಕರ್‌ಬಲಾ' ಮೈದಾನಿನಲ್ಲಿ ಯಜೀದನ ಸೈನಿಕರಿಂದ ಕ್ರೂರತೆಯಿಂದ ಕೊಲೆಮಾಡಲ್ಪಟ್ಟನು.

ಈ ಬಗ್ಗೆ ದುಃಖಸೂಚಕವಾಗಿ ಇಸ್ಲಾಂ ಮತಾನುಯಾಯಿಗಳು ಮೊಹರಮ್ ತಿಂಗಳ ಮೊದಲ ೧೦ ದಿನ ಸೂತಕವನ್ನು ಆಚರಿಸುತ್ತಾರೆ. ಹತ್ತನೇ ದಿನ 'ಮರ್ಸಿಯಾ' ಎಂಬ ಶೋಕಗೀತಗಳನ್ನು ಹಾಡುತ್ತಾ ಮೆರವಣಿಗೆ ಹೋಗುವುದೂ ಇದೆ.

1957-58ರಲ್ಲಿ ಹಬ್ಬದಿನಗಳು

ಹಿಂದೂ ಹಬ್ಬಗಳು

1957 ಎಪ್ರಿಲ್

1 ಚಾಂದ್ರ ಯುಗಾದಿ
5 ರಾಮಾನುಜಾರ್ಯ ಜಯಂತಿ
8 ಶ್ರೀ ರಾಮ ಜಯಂತಿ
9 ಶ್ರೀ ರಾಮ ನವಮಿ
13 ಮೇಷ ಸಂಕ್ರಮಣ (ವಿಷು)
14 ಸೌರಮಾನ ಯುಗಾದಿ
,, ಹನುಮಜ್ಜಯಂತಿ

ಮೇ

2 ಅಕ್ಷಯ ತೃತೀಯಾ
4 ಶ್ರೀ ಶಂಕರ ಜಯಂತಿ
12 ಶ್ರೀ ವ್ಯಾಸ ಜಯಂತಿ
,, ಶ್ರೀ ನೃಸಿಂಹ ಜಯಂತಿ
13 ಚಂದ್ರಗ್ರಹಣ

ಜುಲಾಯಿ

1 ೧೩೬೭ನೇ ಫಸಲಿ
7 ಚಾತುರ್ಮಾಸ್ಯಾರಂಭ
8 ಆಷಾಢ ಏಕಾದಶೀ
16 ಕರ್ಕಾಟಕ ಸಂಕ್ರಮಣ
17 ದಕ್ಷಿಣಾಯನ
,, ಮಧ್ವಾಚಾರ್ಯರ ಜನ್ಮ
31 ನಾಗರ ಪಂಚಮಿ

ಓಗಸ್ಟ್

1 ಸಾಮೋಪಾಕರ್ಮ
9 ವರಮಹಾಲಕ್ಷ್ಮೀವೃತ
10 ಋಗ್ಯಜುರುಪಾಕರ್ಮ
,, ಸಮುದ್ರಪೂಜೆ
15 ಸ್ವಾತಂತ್ರ್ಯದಿನ
18 ಶ್ರೀಕೃಷ್ಣಾಷ್ಟಮಿ
28 ಗೌರೀ ತೃತೀಯಾ
,, ಗಣೇಶ ಚತುರ್ಥಿ
,, ಸಾಮೋಪಾಕರ್ಮ
29 ಋಷಿಪಂಚಮಿ

ಸಪ್ಟೆಂಬರ

1 ಎಳೆಯಷ್ಟಮಿ
2 ಕೊಡಗು ಕ್ಯೊಲು ಹಬ್ಬ

5 ದಧಿ ವಾಮನ ಜಯಂತಿ
8 ಅನಂತ ಚತುರ್ದಶೀ
10 ಮಹಾಲಯಾರಂಭ
23 ಮಹಾಲಯಾಮಾವಾಸ್ಯೆ
24 ನವರಾತ್ರ್ಯಾರಂಭ
28 ಲಲಿತಾ ಪಂಚಮಿ
30 ಮೂಲಾ ನಕ್ಷತ್ರ
,, ಶಾರದಾ ಪೂಜೆ

ಒಕ್ಟೋಬರ

1 ದುರ್ಗಾಷ್ಟಮಿ
,, ಆಯುಧಪೂಜೆ
2 ಮಹಾನವಮಿ
2 ಗಾಂಧಿ ಜಯಂತಿ
3 ವಿಜಯದಶಮಿ
,, ಬುದ್ಧ ಜಯಂತಿ (ದ್ವಿದಳ ವ್ರತ)
,, ಶಮೀಪೂಜಾ; ಕಾರ್ತಿಕ ಸ್ನಾನಾರಂಭ
17 ಕಾವೇರಿ ಸಂಕ್ರಮಣ
20 ಧನ್ವಂತರಿ ಜಯಂತಿ
21 ಸಾಯಂ. ಜಲಪೂಜಾ
22 ನರಕ ಚತುರ್ದಶೀ
,, ಧನಲಕ್ಷ್ಮೀ ಪೂಜಾ
23 ದೀಪಾವಳಿ ಅಮಾವಾಸ್ಯೆ
,, ಗೋಪೂಜಾ
24 ಬಲಿಪಾಡ್ಯ; ಅಂಗಡಿ ಪೂಜೆ

ನವಂಬರ

3 ಕಾರ್ತಿಕ ಏಕಾದಶೀ
,, ಕ್ಷೀರಾಬ್ಧಿ ಪೂಜಾ
4 ತುಳಸಿ ಪೂಜೆ
6 ವೈ. ಚತುರ್ದಶಿ
7 ಕಾರ್ತಿಕ ಪೂರ್ಣಿಮಾ
,, ಕಾರ್ತಿಕ ಸ್ನಾನ ಸಂಪೂರ್ಣ
7 ಚಂದ್ರಗ್ರಹಣ
,, ಕೊಡಗು ಹಬ್ಬ
21 ಧರ್ಮಸ್ಥಳ ದೀಪೋತ್ಸವ
27 ಚಂಪಾ ಸುಬ್ರಹ್ಮಣ್ಯ ಷಷ್ಠಿ

ದಶಂಬರ

3 ವೈಕುಂಠ ಏಕಾದಶೀ
4 ಮುಕ್ಕೋಟಿ ದ್ವಾದಶೀ
6 ಶ್ರೀದತ್ತ ಜಯಂತಿ
16 ಧನುರ್ಮಾಸಾರಂಭ
21 ಎಳ್ಳಮಾವಾಸ್ಯೆ

1958 ಜನವರಿ

13 ಮಕರ ಸಂಕ್ರಮಣ
14 ಉತ್ತರಾಯನ
,, ಕದ್ರಿತೀರ್ಥ; ಪೊಂಗಾಲ್
,, ಉಡ್ಪಿ ಜಾತ್ರೆ
26 ಪ್ರಜಾರಾಜ್ಯ ದಿನ
27 ರಥಸಪ್ತಮಿ
28 ಭೀಷ್ಮಾಷ್ಟಮಿ
29 ಮಧ್ವನವಮಿ

ಫೆಬ್ರವರಿ

16 ಮಹಾಶಿವರಾತ್ರಿ
,, ಉಪ್ಪಿನಂಗಡಿ ಜಾತ್ರೆ

ಮಾರ್ಚ್

4 ಉಪ್ಪಿನಂಗಡಿ ೨ನೇ ಕೂಟ
5 ಹೋಳಿ ಹಬ್ಬ
12 ಉಪ್ಪಿನಂಗಡಿ ಕಡೇ ಜಾತ್ರೆ
14 ಪೊಳಲಿ ಧ್ವಜಾರೋಹಣ
19 ,, ದಂಡ ಮಾಲೋತ್ಸವ

ಕ್ರೈಸ್ತರ ಹಬ್ಬಗಳು

1957 ಎಪ್ರಿಲ್

19 ಕ್ರಿಸ್ತನ ಮರಣದಿನ
20 ಪರಿಶುದ್ಧ ಶನಿವಾರ
21 ಪಸ್ಕ ಹಬ್ಬ

ಓಗಸ್ಟ್

15 ಮರಿಯಳ ಸ್ವರ್ಗಾರೋಹಣ

ದಶಂಬರ

1 ಕ್ರಿಸ್ತನ ಆಗಮನ
25 ಕ್ರಿಸ್ತನ ಜನನದ ಹಬ್ಬ(ಕ್ರಿಸ್ಮಸ್)

1958 ಜನವರಿ

1 ನವಸಂವತ್ಸರದ ಹಬ್ಬ

ಮುಹಮ್ಮದೀ ಹಬ್ಬಗಳು

1957 ಎಪ್ರಿಲ್

2 ರಮ್ಜಾನ್ ಉಪವಾಸ

ಮೇ

1 ಉಪವಾಸ ಕಡೇ ದಿನ
[illegible] ಶವ್ವಾಲ್ ಪೆರುನಾಳ್

ಜುಲಾಯಿ

9 ಬಕ್ರೀದ್ ಹಬ್ಬ

29 ಮೊಹರಮ್ ಆರಂಭ

ಓಗಸ್ಟ್

7 ಮೊಹರಮ್ ಕಡೇ ದಿನ

ಒಕ್ಟೋಬರ

7 ಈದ್ ಮಿಲಾದ್

[ಕವರಿನ 2ನೇ ಪುಟದಿಂದ ಮುಂದುವರಿದುದು]

ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೊಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತ ಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ; ೧೦೩ ಕೇರಳ ಜ್ಯೋತಿಷ. ೧೦೪ ಒಗಟುಗಳ ಗೊಂಚಲು. ೧೦೫ ಊರ-ಔಷಧಿಗಳು; ೧೦೬ ಮದ್ದು ಅವಾಂತರ; ೧೦೭ ಜಗತ್ತಿನ ವಿಜ್ಞಾನಿಗಳು; ೧೦೮ ನಮ್ಮ ದೇಶ; ೧೦೯ ಗ್ರಾಮ ಸ್ವಾತಂತ್ರ್ಯ. ೧೧೦. ನಮ್ಮ ಕನ್ನಡನಾಡು. ೧೧೧. ಭಕ್ತ ಧ್ರುವ (ಏಕಾಂಕ ನಾಟಕ); ೧೧೨. ಕರ್ಣಾಟಕ ಕವಿಚರಿತ್ರೆ; ೧೧೩ ಚೇಡನ ಮಗಳು; ೧೧೪ ವಿವೇಕಾನಂದವಾಣಿ; ೧೧೫ ನಮ್ಮ ಆಹಾರ; ೧೧೬ ಗಾದೆಗಳು ಮತ್ತು ಜ್ಞಾನೋಕ್ತಿಗಳು; ೧೧೭ ಪುರಂದರದಾಸರು (ಏಕಾಂಕ ನಾಟಕ); ೧೧೮ ಮನುಷ್ಯ ಯಜ್ಞ. ೧೧೯ ಹೆಮ್ಮಕ್ಕಳ ಹಾಡುಗಳು; ೧೨೦ ನಮ್ಮ ಹಬ್ಬಗಳು;

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

1957ರಲ್ಲಿ ಬೇಂಕು ರಜಾದಿನಗಳು.

ಮೈಸೂರು ಸಂಸ್ಥಾನ.

೧ ಎಲ್ಲ ರವಿವಾರಗಳು.
೨ ಜನವರಿ 1, ಮಂಗಳವಾರ....ಹೊಸವರ್ಷ
೩ ,, 14, ಸೋಮವಾರ....ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಮಣ.
೪ ,, 26, ಶನಿವಾರ ....ಪ್ರಜಾರಾಜ್ಯದಿನ.
೫ ಫೆಬ್ರವರಿ 27, ಬುಧವಾರ ....ಮಹಾಶಿವರಾತ್ರಿ.
೬ ಮಾರ್ಚ್ 15, ಶುಕ್ರವಾರ ....ಹೋಳಿ ಹಬ್ಬ.
೭ ಎಪ್ರಿಲ್ 1, ಸೋಮವಾರ....ಚಾಂದ್ರಮಾನ ಯುಗಾದಿ.
೮ ಮೇ 13, ಸೋಮವಾರ....ಬುದ್ಧ ಪೂರ್ಣಿಮಾ.
೯ ಜೂನ್ 29, ಶನಿವಾರ ....ಬೇಂಕ್‌ಗಳ ಅರ್ಧ ವಾರ್ಷಿಕ ಲೆಕ್ಕಗಳ ಮುಕ್ತಾಯ.
೧೦ ಅಗೋಸ್ತು 7, ಬುಧವಾರ ....ಮೊಹರಂ ಕಡೇ ದಿನ.
೧೧ ,, 10, ಶನಿವಾರ ....ಅಶ್ವಲಾಯನ (ಋಗ್ಯಜುರುಪಾಕರ್ಮ) ಉಪಾಕರ್ಮ
೧೨ ,, 15 ಗುರುವಾರ ....ಸ್ವಾತಂತ್ರ್ಯದಿನ.
೧೩ ,, 28, ಬುಧವಾರ ....ಗಣೇಶ ಚತುರ್ಥಿ.
೧೪ ಸಪ್ಟಂಬರ 23, ಸೋಮವಾರ....ಮಹಾಲಯ ಅಮಾವಾಸ್ಯೆ.
೧೫ ,, 24, ಮಂಗಳವಾರ....ನವರಾತ್ರ್ಯಾರಂಭ.
೧೬ ಒಕ್ಟೋಬರ 1, ಮಂಗಳವಾರ....ದುರ್ಗಾಷ್ಟಮೀ(ಆಯುಧಪೂಜೆ)
೧೭ ,, 2, ಬುಧವಾರ ....ಮಹಾತ್ಮಾ ಗಾಂಧಿಯವರ ಜನ್ಮ ದಿನ ಮತ್ತು ಮಹಾನವಮಿ.
೧೮ ,, 3, ಗುರುವಾರ ....ವಿಜಯದಶಮೀ.
೧೯ ,, 22, ಮಂಗಳವಾರ....ನರಕ ಚತುರ್ದಶಿ.
೨೦ ,, 24, ಗುರುವಾರ ....ಬಲಿಪಾಡ್ಯ.
೨೧ ದಶಂಬರ 25, ಬುಧವಾರ ....ಕ್ರಿಸ್ಮಸ್.
೨೨ ,, 31, ಮಂಗಳವಾರ....ಬೇಂಕ್‌ಗಳ ವಾರ್ಷಿಕ ಲೆಕ್ಕಗಳ ಮುಕ್ತಾಯ.

'ಒಂದಾಣೆ ಮಾಲೆ' ಪುಸ್ತಕಗಳು ಪ್ರತಿ ಶನಿವಾರ ಹೊರಡುತ್ತವೆ. ಒಂದೊಂದು ವಾರ ಒಂದೊಂದು ಹೊಸ ಪುಸ್ತಕ. ಪ್ರತಿಯೊಂದಕ್ಕೆ ಒಂದಾಣೆ. ಈ ಮಾಲೆಯಲ್ಲಿ, 1957ನೇ ಜನವರಿ ಎರಡನೇ ವಾರದ ವರೆಗೆ 120 ಪುಸ್ತಕಗಳು ಹೊರಟಿವೆ.

ಏಜಂಟರಿಲ್ಲದ ಕಡೆಗಳ ಪುಸ್ತಕ ವ್ಯಾಪಾರಿಗಳು ಏಜನ್ಸಿಗಾಗಿ ಬರಕೊಳ್ಳಿರಿ

ಒಂದಾಣೆ ಮಾಲೆಯ ಪುಸ್ತಕಗಳು ಟಪ್ಪಾಲು ಮೂಲಕ ಬೇಕಾದವರಿಗೆ

ಒಂದಾಣೆ ಮಾಲೆಯ ಪುಸ್ತಕಗಳನ್ನು ಆಯಾಯ ಸ್ಥಳದ ಏಜಂಟರಿಂದಲೇ ಪಡಕೊಳ್ಳುವುದು ಒಳ್ಳೇದು. ಇದರಿಂದ ಟಪ್ಪಾಲು ಖರ್ಚು ಉಳಿಯುವುದು.

ಏಜಂಟರು ಇಲ್ಲದ ಕಡೆಗಳಲ್ಲಿ, ಟಪ್ಪಾಲು ಮೂಲಕ ಅಪೇಕ್ಷಿಸುವವರು, ಬೇಕಾದ ಪುಸ್ತಕಗಳ ಕ್ರಯವನ್ನೂ, ಟಪ್ಪಾಲು ಖರ್ಚನ್ನೂ ಮುಂಗಡವಾಗಿ ಕಳುಹಿಸಬೇಕು. ಪ್ರತಿ ಪುಸ್ತಕದ ಬೆಲೆ ಒಂದಾಣೆ. ಸಾಧಾರಣ ಪ್ರತೀ ಮೂರು ಪುಸ್ತಕಗಳಿಗೆ ಟಪ್ಪಾಲು ಖರ್ಚು ಒಂದಾಣೆ. ಈ ಪ್ರಕಾರ ಕಳುಹಿಸಬೇಕು.

ಒಂದು ವರ್ಷದ 52 ಪುಸ್ತಕಗಳು ಬೇಕಾದವರು, ರೂ. 4–8–0 ಮುಂಗಡವಾಗಿ ಕಳುಹಿಸಿದರೆ, ಆಗಲೇ ಪ್ರಕಟವಾಗಿದ್ದ ಪುಸ್ತಕಗಳನ್ನು ಹಣ ತಲಪಿದ ಕೂಡಲೆ ಕಳುಹಿಸುವುದಲ್ಲದೆ, ಆ ಮೇಲೆ ಒಮ್ಮೆಗೆ ಪ್ರತೀ ಮೂರು ಅಥವಾ ನಾಲ್ಕು ಪುಸ್ತಕಗಳಂತೆ ಅವುಗಳು ಪ್ರಕಟವಾದ ಹಾಗೆ, ಒಟ್ಟು 52 ಪುಸ್ತಕಗಳಾಗುವ ವರೆಗೆ ಟಪ್ಪಾಲಿನಲ್ಲಿ ಕಳುಹಿಸಲಾಗುವುದು.

ವಿ. ಪಿ. ಕಳುಹಿಸಲಾಗುವುದಿಲ್ಲ.

ಒಂದಾಣೆ ಮಾಲೆ,

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು-೧.

Edited, Printed & Published by K. V. Shenoy
at The Prabhat Printers, Ltd., Mangalore.